ವಿಷಯ ಶೈಕ್ಷಣಿಕ ಗುಣಮಟ್ಟ ಅಭಿವೃದ್ಧಿಯ ಕಾರ್ಯಕ್ರಮಗಳನ್ನು(EQUIP–ಸಾಧನೆ): ಆಡಳಿತಾತ್ಮಕ ಅನುಮೋದನೆ ಕುರಿತು

ಪ್ರಸ್ತಾವನೆ:

1. ಸಂವಿಧಾನವು ಸೂಕ್ತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು 6 ರಿಂದ 14 ವಯೋಮಾನದೊಳಗಿನ ಎಲ್ಲ ಮಕ್ಕಳು ಶಾಲೆಗಳಿಗೆ ದಾಖಲಾಗುವುದು, ಹಾಜರಾಗುವುದು ಮತ್ತು ಶಿಕ್ಷಣವನ್ನು ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ಹೊರಿಸಿದೆ. ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಈ ಗುರಿಯನ್ನು ಬಹುತೇಕ ಸಾಧಿಸಲಾಗಿದ್ದರೂ, ಪ್ರೌಢ ಶಿಕ್ಷಣ ಹಂತದಲ್ಲಿ ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ಗಣನೀಯವಾಗಿದೆ. ಮೇಲಾಗಿ ಶಾಲೆಗಳಲ್ಲಿ, ವಿಶೇಷವಾಗಿ ಸರ್ಕಾರಿ ಶಾಲೆಗಳಲ್ಲಿನ ಶೈಕ್ಷಣಿಕ ಗುಣಮಟ್ಟವು ಕಳಕಳಿಯ ಅಂಶವಾಗಿದೆ. ಶಾಲೆಗಳಲ್ಲಿನ ಮಕ್ಕಳ ಕಲಿಕಾ ಸಾಧನೆಯು ಅಪೇಕ್ಷಿತ ತರಗತಿ ಮತ್ತು ವಯೋಮಾನ ನಿರ್ಧಿಷ್ಠತೆಗಿಂತಲೂ ತುಂಬಾ ಕಡಿಮೆ ಇವೆ ಎಂಬ ಅಂಶವನ್ನು ಹಲವು ಅಧ್ಯಯನಗಳು ಸೂಚಿಸುತ್ತವೆ.

2. “ಪ್ರತಿ ಮಗುವು ಶಾಲೆಯಲ್ಲಿ ಮತ್ತು ಉತ್ತಮ ಕಲಿಕೆಯೊಂದಿಗೆ” ಎಂಬ ನೀತಿ ಗುರಿಯನ್ನು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಧ್ಯೇಯವಾಗಿ ಅಳವಡಿಸಿಕೊಳ್ಳುವಂತೆ ಪ್ರಸ್ತಾಪಿಸಲಾಗಿರುತ್ತದೆ. ಈ ನೀತಿ ಗುರಿಯನ್ನು ಸಾಧಿಸಲು ಹಲವಾರು ಪೂರಕ ಕಾರ್ಯಕ್ರಮಗಳಾದ ಶೈಕ್ಷಣಿಕ ಅಭಿವೃದ್ಧಿ, ಗುಣಮಟ್ಟ ಖಾತ್ರಿ, ವಿದ್ಯಾರ್ಥಿಗಳ ಪ್ರೇರಣೆ, ಸೇವಾ ನಿರತ ಶಿಕ್ಷಕರ ತರಬೇತಿ, ಶಿಕ್ಷಕರ ಬದ್ಧತೆ ಹಾಗೂ ಸಣ್ಣ ಶಾಲೆಗಳ ಕ್ರೋಢೀಕರಣ ಇವುಗಳಿಗೆ ಒತ್ತು ನೀಡುವ ಅಗತ್ಯವಿದೆ.

3. 2016–17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಿಸಲು, ಪ್ರಸ್ತುತ ಇರುವ ಯೋಜನೆಗಳನ್ನು ತಾರ್ಕಿಕವಾಗಿ ಸಮನ್ವಯಗೊಳಿಸಿ ಕೆಳಕಂಡ 5 ಹೊಸ ಕಾರ್ಯಕ್ರಮಗಳಡಿ ತರಲಾಗುವುದು ಎಂದು ಘೋಷಿಸಿದೆ.

i. ಶಿಕ್ಷಣ ಗುಣಮಟ್ಟ ಸುಧಾರಣಾ ಉಪಕ್ರಮ
ii. ಗುಣಮಟ್ಟ ಖಾತರಿಯ ಉಪಕ್ರಮಗಳು
iii. ತಂತ್ರಜ್ಞಾನ ಆಧಾರಿತ ಕಲಿಕೆ
iv. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕಗಳು

v. ವಿದ್ಯಾರ್ಥಿಗಳನ್ನು ಪ್ರೇರೇಪಿಸುವ ಕಾರ್ಯಕ್ರಮಗಳು ಎಂದು ಘೋಷಿಸಲಾಗಿರುತ್ತದೆ.

4. ಮೇಲೆ ಪಟ್ಟಿ ಮಾಡಲಾದ ಐದು ಕಾರ್ಯಕ್ರಮಗಳ ಪೈಕಿ, ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮ(ಖಿಂಐಕ) ಮತ್ತು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ವಿದ್ಯಾರ್ಥಿ ಪ್ರೇರಕ ಪ್ರೋತ್ಸಾಹಕಗಳ ಹಲವು ಘಟಕಗಳಿಗೆ ಈಗಾಗಲೇ ಸರ್ಕಾರವು ಅನುಮೋದನೆ ನೀಡಿರುತ್ತದೆ.

5. ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ 100ರಲ್ಲಿ ಈ ಕೆಳಕಂಡ ಚಟುವಟಿಕೆಗಳನ್ನು ಘೋಷಿಸಲಾಗಿದೆ.

i. ಸರ್ಕಾರಿ ಶಾಲೆಗಳಲ್ಲಿನ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯಡಿ ಖಾಸಗಿ ಶಾಲೆಗಳಿಗೆ ದಾಖಲಾದ ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಮೂಲಕ ಮೇಲುಸ್ತುವಾರಿ ಮಾಡುವುದು;

ii. ಸರ್ಕಾರಿ ಶಾಲೆಗಳಲ್ಲಿ ಕಡಿಮೆ ಕಲಿಕಾ ಸಾಧನೆಯಿರುವ ಮಕ್ಕಳಿಗೆ ರಜಾ ಅವಧಿಯಲ್ಲಿ ಪೂರಕ ಬೋಧನೆಯನ್ನು ವ್ಯವಸ್ಥೆಗೊಳಿಸುವುದು;

iii. ಚಟುವಟಿಕೆ ಆಧಾರಿತ ನಲಿಕಲಿ ಪದ್ದತಿಯನ್ನು ಯಶಸ್ವಿ ವಿಧಾನವೆಂದು ಗುರುತಿಸಲಾಗಿದ್ದು, ಅದನ್ನು ವಸ್ತುನಿಷ್ಠ ಮೌಲ್ಯಮಾಪನ ಮುಖಾಂತರ ಪುನರ್‌ರೂಪಿಸಿ ಮಾಡಿ ಸಮಗ್ರವಾಗಿ ಅನುಷ್ಠಾನಗೊಳಿಸುವುದು;

iv. 4 ಮತ್ತು 5ನೇ ತರಗತಿಗಳಿಗೆ ಚಟುವಟಿಕೆಯಾಧಾರಿತ ಗಣಿತ ಕಲಿಕೆಯನ್ನು ವಿಸ್ತರಿಸುವುದು;

v. ಶಿಕ್ಷಣದ ಗುಣಮಟ್ಟ ವೃದ್ಧಿಗಾಗಿ ಮತ್ತು ವಿದ್ಯಾರ್ಥಿಗಳ ಪ್ರೇರಣೆಗಾಗಿ ಲಾಭರಹಿತ ಸಂಸ್ಥೆಗಳ ಯಶಸ್ವಿ ಉಪಕ್ರಮಗಳನ್ನು ಮುಂದಿನ ಮೂರು ವರ್ಷಗಳವರೆಗೆ ಸರ್ಕಾರದ 50%ರ ನೆರವಿನೊಂದಿಗೆ ಮುಂದುವರೆಸುವುದು;

6. ಉದ್ದೇಶಿತ ನೀತಿಗುರಿಯನ್ನು ತಲುಪುವ ನಿಟ್ಟಿನಲ್ಲಿ ಸಮಗ್ರ ಶಿಕ್ಷಣ ಗುಣಮಟ್ಟ ಅಭಿವೃದ್ಧಿ ಕಾರ್ಯಕ್ರಮವನ್ನು ರೂಪಿಸಲಾಗಿದ್ದು ಸರ್ಕಾರದಿಂದ ಅನುಮೋದಿಸಿದೆ.

7. ಆದುದರಿಂದ ಶಿಕ್ಷಣ ಗುಣಮಟ್ಟ ಅಭಿವೃದ್ಧಿ ಕಾರ್ಯಕ್ರಮವನ್ನು(**EQUIP–ಸಾಧನೆ**) ಅನುಷ್ಠಾನಗೊಳಿಸಲು ಸರ್ಕಾರವು ಈ ಕೆಳಗಿನಂತೆ ಆದೇಶ ಹೊರಡಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 77 ಮಾಹಿತಿ 2016, ಬೆಂಗಳೂರು, ದಿನಾಂಕ: 30.07.2016

1. 2016-17ನೇ ಸಾಲಿನಿಂದ "ಪ್ರತಿ ಮಗುವು ಶಾಲೆಯಲ್ಲಿ ಮತ್ತು ಉತ್ತಮ ಕಲಿಕೆಯೊಂದಿಗೆ" ಎಂಬ ನೀತಿ ಗುರಿಯು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆಯ ಧ್ಯೇಯವಾಗಿರುತ್ತದೆ.

2. ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆ ಮತ್ತು ಕಾಲೇಜುಗಳಲ್ಲಿ ಆಧಾರ್‌ಅನ್ನು ಕಡ್ಡಾಯಗೊಳಿಸುವುದು. ಆಧಾರ್ ಸಂಖ್ಯೆಯ ಮೂಲಕ ವಿದ್ಯಾರ್ಥಿ ಗುರುತಿಸುವಿಕೆ ಮತ್ತು ಅವರ ಕಲಿಕೆಯನ್ನು ನಿರ್ವಹಿಸಲು ಕರ್ನಾಟಕ ಶಿಕ್ಷಣ ಹಕ್ಕು ಕಾಯ್ದೆಯಡಿ ಅಗತ್ಯವಿರುವ ನಿಯಮಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು. 2016ರ ಡಿಸೆಂಬರ್ ಅಂತ್ಯದೊಳಗೆ 6-14 ವಯೋಮಾನದ ಎಲ್ಲ ವಿದ್ಯಾರ್ಥಿಗಳ ಆಧಾರ್ ಸಂಖ್ಯೆಯನ್ನು ನೋಂದಾಯಿಸಲು ಕ್ರಮವಹಿಸುವುದು.

3. ಶಿಕ್ಷಣ ಗುಣಮಟ್ಟ ಅಭಿವೃದ್ಧಿ ಕಾರ್ಯಕ್ರಮದಡಿ(EQUIP-ಸಾಧನೆ) ನೀತಿ ಗುರಿಯನ್ನು ಸಾಧಿಸಲು ಈ ಕೆಳಗಿನ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿದೆ.

- **i. ಚಟುವಟಿಕೆ ಆಧಾರಿತ ಕಲಿಕೆ – ನಲಿ ಕಲಿ ಅನುಷ್ಠಾನ 1 ರಿಂದ 3ನೇ ತರಗತಿಯವರೆಗೆ;**
- **ii. 4 ಮತ್ತು 5ನೇ ತರಗತಿಗಳಿಗೆ ಚಟುವಟಿಕೆ ಆಧಾರಿತ ಗಣಿತ ಕಲಿಕಾಬೋಧನಾ ವಿಧಾನವನ್ನು ವಿಸ್ತರಿಸುವುದು;**
- **iii. ಕಲಿಕಾ ಸಾಧನೆಗಳ ನಿರ್ವಹಣೆಗಾಗಿ ಮಾಹಿತಿ ತಂತ್ರಾಂಶ ಆಧಾರಿತ ವಿದ್ಯಾರ್ಥಿಗಳ ಸಾಧನೆ ಜಾಡು ಹಿಡಿಯುವ ವ್ಯವಸ್ಥೆ;**
- **iv. ವಿಧ್ಯಾರ್ಥಿಗಳ ಆಧಾರ್ ನೊಂದಣಿಗಾಗಿ ಆಂದೋಲನ;**
- **v. ಪೂರಕ ಬೋಧನೆ;**

4. ಮೇಲೆ ತಿಳಿಸಿದ ಚಟುವಟಿಕೆಗಳ ವ್ಯಾಪ್ತಿ ಮತ್ತು ಅವುಗಳ ಅನುಷ್ಠಾನದ ಜವಾಬ್ದಾರಿಯ ವಿವರಗಳನ್ನು ಈ ಆದೇಶದೊಂದಿಗೆ ಲಗತ್ತಿಸಿದ ಅನುಬಂಧದಲ್ಲಿ ನೀಡಲಾಗಿದೆ.

5. ಈ ಸರ್ಕಾರದ ಆದೇಶದಲ್ಲಿ ತಿಳಿಸಿರುವ ಪ್ರತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಮುನ್ನ ಪ್ರತಿ ಚಟುವಟಿಕೆಗೆ ಸವಿವರವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆದುಕೊಳ್ಳತಕ್ಕದ್ದು.

6. ನಿರ್ದಿಷ್ಟ ಚಟುವಟಿಕೆಗಳಿಗೆ ಕ್ರಿಯಾ ಯೋಜನೆಗಳ ಅನುಮೋದನೆಯಾದ ನಂತರ ಅನುದಾನ ಬಿಡುಗಡೆ ಕುರಿತು ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

7. ಈ ಕಾರ್ಯಕ್ರಮಕ್ಕೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಮುಖ್ಯ ನಿಯಂತ್ರಣ ಅಧಿಕಾರಿಯಾಗಿರುತ್ತಾರೆ.

8. 2016-17ನೇ ಸಾಲಿಗಾಗಿ ಈ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಅನುಮೋದಿಸಿದ ಒಟ್ಟಾರೆ ಅನುದಾನ ರೂ 74 ಕೋಟಿಗಳಾಗಿರುತ್ತವೆ. ಈ ವರ್ಷ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಿಂದ ರೂ 40 ಕೋಟಿಗಳನ್ನು ಬಳಸಿಕೊಳ್ಳಲಾಗುವುದು. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ವಿಧ್ಯಾರ್ಥಿಗಳಿಗೆ ಪ್ರೇರಣೆ ಚಟುವಟಿಕೆಯಡಿ ಲಭ್ಯವಿರುವ ರೂ 30 ಕೋಟಿಗಳನ್ನು ಸರ್ಕಾರಕ್ಕೆ ಹಿಂತಿರುಗಿಸುವ ಷರತ್ತಿಗೆ ಬದ್ದವಾಗಿ ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಅಗತ್ಯವಿರುವ ಬಾಕಿ ರೂ 34 ಕೋಟಿಗಳನ್ನು ಆಯವ್ಯಯದ ಪೂರಕ ಬೇಡಿಕೆಯ ಮೂಲಕ ಒದಗಿಸಿಕೊಳ್ಳಲಾಗುವುದು.

9. ಮುಂದಿನ ಸಾಲುಗಳಲ್ಲಿ ಚಟುವಟಿಕೆಗಳ ವ್ಯಾಪ್ತಿ ಮತ್ತು ಕಾರ್ಯಕ್ರಮಕ್ಕೆ ಅನುದಾನದ ಲಭ್ಯತೆಯನ್ನು ಆಯವ್ಯಯದಲ್ಲಿನ ಅನುದಾನದ ಲಭ್ಯತೆಯ ಆಧಾರ ನಿರ್ಧರಿಸಲಾಗುವುದು.

10. ಕರ್ನಾಟಕ ಸರ್ಕಾರದ ಪಾರದರ್ಶಕ ಕಾಯ್ದೆಯ ನಿಯಮಗಳನ್ನು ಮತ್ತು ಪ್ರಚಲಿತದಲ್ಲಿರುವ ಎಲ್ಲ ನಿಯಮ/ಪದ್ಧತಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

11. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 387 ವೆಚ್ಚ-8/2016 ದಿನಾಂಕ 28.06.2016ರ ಅನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ**

2017

**(ಅಪರ್ಣಾ ಪಾವಟೆ)**
**ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ**
**ಉಪ ಕಾರ್ಯದರ್ಶಿ (ಯೋಜನೆ)**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**

ಪ್ರತಿ:

1. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು

2. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು
4. ಕಾರ್ಯದರ್ಶಿಯವರು, ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ
6. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
7. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
8. ಅಪರ ಅಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಕಲಬುರಗಿ.
9. ನಿರ್ದೇಶಕರು, ಡಿಎಸ್ಇಆರ್‌ಟಿ, ಬೆಂಗಳೂರು
10. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ/ ಪ್ರೌಢ ಶಿಕ್ಷಣ / ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
11. ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
12. ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
13. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು
14. ಉಪ ನಿರ್ದೇಶಕರು, ಖಜಾನಾ ಗಣಕ ಕೇಂದ್ರ, #49, ಖನಿಜ ಭವನ, ಬೆಂಗಳೂರು
15. ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು
16. ಕಛೇರಿ ಪ್ರತಿ

ಅನುಬಂಧ

1. **ಚಟುವಟಿಕೆ ಆಧಾರಿತ ಕಲಿಕೆ – ತರಗತಿ 1 ರಿಂದ 3ನೇ ತರಗತಿಯವರೆಗೆ ನಲಿ ಕಲಿ:**

ನಲಿಕಲಿಯನ್ನು ಸಮಗ್ರವಾಗಿ ಅನುಷ್ಠಾನಗೊಳಿಸಲು ಈ ಕೆಳಕಂಡ ಚಟುವಟಿಕೆಗಳನ್ನು ಯೋಜಿಸಿದೆ.

i. 45,000 ಸರ್ಕಾರಿ ಶಾಲೆಗಳಿಗೆ ಕಲಿಕಾ ಸಾಮಗ್ರಿಗಳನ್ನೊಳಗೊಂಡಂತೆ ಕಲಿಕಾ ಕಾರ್ಡ್‌ಗಳು, ವಾಚಕಗಳು ಹಾಗೂ ಅಭ್ಯಾಸ ಪುಸ್ತಕಗಳನ್ನು ಒದಗಿಸುವುದು.

ii. ನಲಿ–ಕಲಿ ಶಿಕ್ಷಕರ ವಿವಿಧ ಅಗತ್ಯತೆಗಳಿಗೆ ಅನುಗುಣವಾಗಿ ತರಬೇತಿಗಳನ್ನು ಆಯೋಜಿಸುವುದು.

iii. ನಲಿ–ಕಲಿ ಪದ್ಧತಿಯ ಗುಣಮಟ್ಟವನ್ನು ಹೆಚ್ಚಿಸಲು ಅಜೀಂ ಪ್ರೇಮ್‌ಜಿ ಪ್ರತಿಷ್ಠಾನದ ಸಹಯೋಗದೊಂದಿಗೆ ಗುಣಮಟ್ಟ ಆಶ್ವಾಸನೆ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವುದು.

iv. ಮಕ್ಕಳ ಜಾಡು ಹಿಡಿಯುವಿಕೆ ಪದ್ಧತಿ ಆಧಾರಿತ ಮೇಲ್ವಿಚಾರಣೆ.

**2016–17ಕ್ಕೆ ಅನುದಾನದ ವಿವರ: ರೂ.37 ಕೋಟಿ.** ಇದರಲ್ಲಿ ರೂ.29 ಕೋಟಿ ಕಲಿಕಾ ಸಾಮಗ್ರಿಗಳಿಗೆ, ರೂ.6 ಕೋಟಿ ನಲಿ–ಕಲಿ ಶಿಕ್ಷಕರ ತರಬೇತಿಗಾಗಿ ಹಾಗೂ ಉಳಿದ ರೂ.2 ಕೋಟಿ ಗುಣಮಟ್ಟ ಖಾತ್ರಿ ಹಾಗೂ ಮೇಲ್ವಿಚಾರಣೆಗಾಗಿ ಬಳಸಿಕೊಳ್ಳತಕ್ಕದ್ದು. ಈ ಎಲ್ಲ ಅನುದಾನವನ್ನು ಸರ್ವ ಶಿಕ್ಷಣ ಅಭಿಯಾನದಿಂದ ಭರಿಸತಕ್ಕದ್ದು.

**ಅನುಷ್ಠಾನ ಜವಾಬ್ದಾರಿ:** ರಾಜ್ಯ ಯೋಜನಾ ನಿರ್ದೇಶಕರ ಒಟ್ಟಾರೆ ಮೇಲುಸ್ತುವಾರಿಯಲ್ಲಿ, ನಿರ್ದೇಶಕರು (ಸಶಿಅ), ನಿರ್ದೇಶಕರು (ಡಿಎಸ್‌ಇಆರ್‌ಟಿ), ಕಾರ್ಯನಿರ್ವಾಹಕ ನಿರ್ದೇಶಕರು(ಕೆಎಸ್‌ಕ್ಯುಎಎಸಿ) ಇವರು ಚಟುವಟಿಕೆ ಅನುಷ್ಠಾನದ ಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ.

2. **4 ಮತ್ತು 5ನೇ ತರಗತಿಗಳಿಗೆ ಚಟುವಟಿಕೆ ಆಧಾರಿತ ಗಣಿತ ಕಲಿಕಾ ಬೋಧನಾ ವಿಧಾನವನ್ನು ವಿಸ್ತರಿಸುವುದು (GKA):**

ಅಕ್ಷರ ಪ್ರತಿಷ್ಠಾನದ ಸಹಯೋಗದೊಂದಿಗೆ ಗಣಿತ ಕಲಿಕಾ ಅಂದೋಲನಾ ಕಾರ್ಯಕ್ರಮವನ್ನು ರಾಜ್ಯದ 6 ಜಿಲ್ಲೆಗಳಾದ ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಾಮರಾಜನಗರ, ಚಿತ್ರದುರ್ಗ, ಗದಗ ಹಾಗೂ ಧಾರವಾಡದಲ್ಲಿನ 6559 ಸರ್ಕಾರಿ ಶಾಲೆಗಳಲ್ಲಿ ಅನುಷ್ಠಾನಗೊಳಿಸುವುದು. ಸದರಿ ಕಾರ್ಯಕ್ರಮದಡಿಯಲ್ಲಿ ವರ್ಷಾವಾರು 1.47 ಲಕ್ಷ ವಿದ್ಯಾರ್ಥಿಗಳಂತೆ ಮೂರು ವರ್ಷಕ್ಕೆ ರೂ.16.8 ಕೋಟಿಗಳ ವೆಚ್ಚವನ್ನು ನಿಗದಿಪಡಿಸಿದೆ. ನಿಗದಿಪಡಿಸಲಾದ ಅನುದಾನದಲ್ಲಿ 50% ರಷ್ಟು ಅನುದಾನವನ್ನು ಪ್ರತಿಷ್ಠಾನವು ತರಬೇತುದಾರ, ಸಂಪನ್ಮೂಲಗಳಿಗಾಗಿ, ಉಸ್ತುವಾರಿ, ಮೇಲ್ವಿಚಾರಣೆ ಮತ್ತು

ನಿರ್ವಹಣೆಗಾಗಿ ದಾನಿಗಳ ಮೂಲಕ ಭರಿಸುವುದು. ಉಳಿದ 50% ರಷ್ಟು ಮೊತ್ತವನ್ನು ಸರ್ಕಾರವು ಕಲಿಕಾ ಕಿಟ್ ಪೂರೈಕೆ ಹಾಗೂ ಶಿಕ್ಷಕರ ತರಬೇತಿಗಾಗಿ ವ್ಯಯಿಸುವುದು. ಸವಿವರವಾದ ಒಪ್ಪಂದವನ್ನು ಅಕ್ಷರ ಪ್ರತಿಷ್ಠಾನದೊಂದಿಗೆ ಮಾಡಿಕೊಳ್ಳತಕ್ಕದ್ದು. ಸರ್ವ ಶಿಕ್ಷಣ ಅಭಿಯಾನದಡಿ ಲಭ್ಯವಿರುವ ಅನುದಾನವನ್ನು ಇದಕ್ಕಾಗಿ ಬಳಸಿಕೊಳ್ಳತಕ್ಕದ್ದು.

**2016–17ಕ್ಕೆ ಅನುದಾನದ ವಿವರ: ರೂ 5 ಕೋಟಿ (ಸರ್ಕಾರದ ಪಾಲು)**

**ಅನುಷ್ಠಾನ ಜವಾಬ್ದಾರಿ:** ರಾಜ್ಯ ಯೋಜನಾ ನಿರ್ದೇಶಕರ ಒಟ್ಟಾರೆ ಮೆಲುಸ್ತುವಾರಿಯಲ್ಲಿ, ನಿರ್ದೇಶಕರು (ಸಶಿಅ), ಇವರು ಚಟುವಟಿಕೆ ಅನುಷ್ಠಾನದ ಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ. ಈ ಚಟುವಟಿಕೆಗಾಗಿ ಸರ್ವ ಶಿಕ್ಷಣ ಅಭಿಯಾನ ಕಚೇರಿಯ ಒಬ್ಬ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸತಕ್ಕದ್ದು.

3. <u>ಮಾಹಿತಿ ತಂತ್ರಾಂಶ ಆಧಾರಿತ ವಿದ್ಯಾರ್ಥಿಗಳ ಜಾಡು ಹಿಡಿಯುವ ವ್ಯವಸ್ಥೆ (ಶಿಕ್ಷಣ ಕಿರಣ –</u> **Students Achievement Tracking Systerm):**

"ಪ್ರತಿ ಮಗುವು ಶಾಲೆಯಲ್ಲಿ ಮತ್ತು ಉತ್ತಮ ಕಲಿಕೆಯೊಂದಿಗೆ" ಎಂಬ ನೀತಿ ಗುರಿಯ ಸಾಧನೆಗಾಗಿ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿನ ಶಾಲಾ ವಯೋಮಾನದ ಎಲ್ಲಾ ಮಕ್ಕಳ ದಾಖಲಾತಿ ಜಾಡು ಹಿಡಿಯುವುದು ಅವಶ್ಯಕವಾಗಿದೆ. ಮುಂದುವರೆದು ಶಾಲಾ ಮಕ್ಕಳ ಹಾಜರಾತಿ ಮತ್ತು ಶೈಕ್ಷಣಿಕ ಸಾಧನೆಯನ್ನು ಸಹ ಮೇಲಸ್ತುವಾರಿ ಮಾಡಬೇಕಿದೆ. ಇಂಥಹ ಜಾಡು ಹಿಡಿಯುವುದರ ಉದ್ದೇಶವು ಅರ್ಹ ವಯೋಮಾನದ ಯಾವುದೇ ಮಗು ಶಾಲೆಯಿಂದ ಹೊರಗುಳಿಯುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಮತ್ತು ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪೂರಕ ಬೋಧನೆಯನ್ನು ವ್ಯವಸ್ಥೆ ಮಾಡುವುದಾಗಿದೆ. ಇನ್ಫೋಸಿಸ್ ಪ್ರತಿಷ್ಠಾನದ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗಿರುವ ತಂತ್ರಾಂಶವನ್ನು ಅಳವಡಿಸಿಕೊಂಡು ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿನ ಶಾಲಾ ವಯೋಮಾನದ ಮಕ್ಕಳ ದಾಖಲಾತಿ, ಹಾಜರಾತಿ ಮತ್ತು ಶೈಕ್ಷಣಿಕ ಸಾಧನೆಯನ್ನು ಮೇಲ್ವಿಚಾರಣೆ ಮಾಡತಕ್ಕದ್ದು. ಲಭ್ಯವಿರುವ ಅನುದಾನವನ್ನು ಕಾರ್ಯನಿರ್ವಹಣೆಗಾಗಿ ಪ್ರಮುಖವಾಗಿ ಮುದ್ರಣ ಹಾಗೂ ದತ್ತಾಂಶದ ಅಳವಡಿಕೆಗಾಗಿ ನಿಗಧಿಪಡಿಸಲಾಗಿದೆ.

**2016–17ಕ್ಕೆ ಅನುದಾನದ ವಿವರ: ರೂ 7 ಕೋಟಿ**

ಅನುಷ್ಠಾನ ಜವಾಬ್ದಾರಿ: ರಾಜ್ಯ ಯೋಜನಾ ನಿರ್ದೇಶಕರು (ಸಶಿಅ ಮತ್ತು ರಾಮಾಶಿಅ) ಇವರು ಚಟುವಟಿಕೆ ಅನುಷ್ಠಾನದ ಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ.

4. <u>ವಿದ್ಯಾರ್ಥಿಗಳ ಆಧಾರ್ ನೋಂದಣಿ ಆಂದೋಲನ:</u>

ಗುಣಮಟ್ಟದ ಶಿಕ್ಷಣ ಮತ್ತು ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕಗಳು ವಿದ್ಯಾರ್ಥಿವೇತನಗಳು ಸೇರಿದಂತೆ ಸಂಬಂಧಿತ ಉಪಕ್ರಮಗಳು ಸಕಾಲದಲ್ಲಿ ತಲುಪುತ್ತಿವೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಮತ್ತು ಸರ್ಕಾರದ ಸಂಪನ್ಮೂಲಗಳ ಸದ್ಬಳಕೆಯನ್ನು ಖಚಿತಪಡಿಸಿಕೊಳ್ಳಲು, ಪ್ರತಿ ವಿದ್ಯಾರ್ಥಿಯನ್ನು ವಿಶಿಷ್ಠ ವಿಧಾನದಿಂದ ಗುರುತಿಸುವುದು ಅವಶ್ಯಕವಾಗಿದೆ. ಮುಂದುವರೆದು ಶಿಕ್ಷಣ ಹಕ್ಕು ಕಾಯ್ದೆಯಡಿ ಕಡ್ಡಾಯ ದಾಖಲಾತಿ, ಹಾಜರಾತಿ ಮತ್ತು ಪ್ರಾಥಮಿಕ ಶಿಕ್ಷಣವನ್ನು 6 ರಿಂದ 14 ವಯೋಮಾನದ ಎಲ್ಲ ಮಕ್ಕಳು ಪೂರ್ಣಗೊಳಿಸುವ ಬದ್ಧತೆಯನ್ನು ರಾಜ್ಯ ಸರ್ಕಾರ ಹೊಂದಿದೆ. ಶಾಲೆಯು ಯಾವುದೇ ಆಗಿರಲಿ ಈ ಮೂರೂ ಅಂಶಗಳು ಅನುಷ್ಠಾನಗೊಂಡಿರುವ ಬಗ್ಗೆ ಸರ್ಕಾರವು ಮೇಲುಸ್ತುವಾರಿ ಮಾಡಬೇಕೆಂದು ಕಾಯ್ದೆಯು ನಿರೀಕ್ಷಿಸುತ್ತದೆ. ಇಂಥಹ ಮೇಲುಸ್ತುವಾರಿಗಾಗಿ ಆಧಾರ್ ಸಂಖ್ಯೆಯನ್ನು ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆ ಮತ್ತು ಕಾಲೇಜುಗಳಲ್ಲಿ ಕಡ್ಡಾಯಗೊಳಿಸಲಾಗುವುದು.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ಬಳಸಲು ಕರ್ನಾಟಕ ಶಿಕ್ಷಣ ಕಾಯ್ದೆ ಅಡಿ ಅವಶ್ಯವಿರುವ ನಿಯಮಗಳನ್ನು ರೂಪಿಸಿ ಅಧಿಸೂಚಿಸುವುದಕ್ಕೆ ಅಗತ್ಯ ಕ್ರಮಗಳನ್ನು ವಹಿಸುವುದು. ಕೇಂದ್ರ ಮಂಡಳಿಗಳಿಗೆ ನೊಂದಣಿಯಾದ ಶಾಲೆಗಳಲ್ಲಿ ಆಧಾರ್‌ಅನ್ನು ಕಡ್ಡಾಯವಾಗಿ ಬಳಸಲು ಸಿಬಿಎಸ್‌ಇ ಮತ್ತು ಐಸಿಎಸ್‌ಇ ಪ್ರಾಧಿಕಾರಗಳೊಂದಿಗೆ ಅಗತ್ಯ ಸಮನ್ವಯತೆಯನ್ನು ಸಾಧಿಸತಕ್ಕದ್ದು.

ಗ್ರಾಮೀಣ ಪ್ರದೇಶದ ಪ್ರತಿ ಶಾಲೆ, ಕಾಲೇಜು ಹಾಗೂ ವಿದ್ಯಾರ್ಥಿ ನಿಲಯಗಳಿಗೆ ಆಧಾರ್ ನೋಂದಣಿ ತಂಡಗಳನ್ನು ಕಳುಹಿಸುವುದು ಮತ್ತು ನಗರ ಪ್ರದೇಶಗಳಲ್ಲಿ ಸ್ಥಿರ ನೊಂದಣಿ ಕೇಂದ್ರ್ರಗಳನ್ನು ತೆರೆಯಲು ಇ–ಆಡಳಿತ ಇಲಾಖೆಯ ಸಹಯೋಗದೊಂದಿಗೆ ಆಧಾರ್ ನೋಂದಣಿ ಅಂದೋಲನವನ್ನು ಹಮ್ಮಿಕೊಳ್ಳುವುದು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ (ತರಗತಿ 1 ರಿಂದ 12)ದ ಎಲ್ಲ ವಿದ್ಯಾರ್ಥಿಗಳನ್ನು ಶೇ 100ರಷ್ಟು ಆಧಾರ್‌ನಲ್ಲಿ ನೊಂದಾಯಿಸಲು ಮತ್ತು ಆಧಾರ್ ಸಂಖ್ಯೆಗಳನ್ನು ಡಿಸೆಂಬರ್ 2016ರೊಳಗೆ ಕರ್ನಾಟಕ ರೆಸಿಡೆಂಟ್ ಡೇಟಾ ಹಬ್‌ನಲ್ಲಿ ಅಳವಡಿಸತಕ್ಕದ್ದು. ನಿಗದಿಪಡಿಸಿದ ಅನುದಾನವನ್ನು ನೋಂದಣಿ ಕಿಟ್‌ಗಳ ಮತ್ತು ನೊಂದಣಿ ತಂಡಗಳ ಸಾಗಣಿಕೆಗಾಗಿ ಬಳಸಿಕೊಳ್ಳತಕ್ಕದ್ದು.

2016-17ಕ್ಕೆ ಅನುದಾನದ ವಿವರ: ರೂ 10 ಕೋಟಿ.

ಅನುಷ್ಠಾನ ಜವಾಬ್ದಾರಿ: ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಚಟುವಟಿಕೆ ಅನುಷ್ಠಾನದ ಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ. ಸರ್ವ ಶಿಕ್ಷಣ ಅಭಿಯಾನ ಕಚೇರಿಯ ಒಬ್ಬ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ಆಯುಕ್ತರಿಗೆ ನೆರವಾಗಲು ನೇಮಿಸತಕ್ಕದ್ದು.

5. <u>ಪೂರಕ ಬೋಧನೆ:</u>

ವಯೋ ನಿರ್ದಿಷ್ಠ ಹಾಗೂ ತರಗತಿ ನಿರ್ದಿಷ್ಠ ಅಪೇಕ್ಷಿತ ಕಲಿಕಾ ಸಾಧನೆಯನ್ನು ಹೊಂದಿಲ್ಲದೇ ಇರುವ ವಿದ್ಯಾರ್ಥಿಗಳಿಗೆ ನೆರವಾಗಲು ಪೂರಕ ಬೋಧನೆಯನ್ನು ಶಾಲಾ ರಜಾ ದಿನಗಳಲ್ಲಿ ಶೈಕ್ಷಣಿಕ ಶಿಬಿರಗಳ ಮಾದರಿಯಲ್ಲಿ ಹಾಗೂ ಶಾಲಾ ದಿನಗಳಲ್ಲಿ ಹೆಚ್ಚುವರಿ ಬೋಧನಾ ಅವಧಿಗಳನ್ನು ವಿಸ್ತರಿಸುವ ಮೂಲಕ ರೂಪಿಸಿ ಅನುಷ್ಠಾನಗೊಳಿಸುವುದು. ವಿದ್ಯಾರ್ಥಿಗಳಿಗೆ ಶಿಕ್ಷಣದ ಗುಣಮಟ್ಟದ ವೃದ್ಧಿಯಲ್ಲಿ ಯಾವುದೇ ಕೊಡುಗೆ ನೀಡದ ಖಾಲಿ ನೋಟ್ ಪುಸ್ತಕ ಹಾಗೂ ಶಾಲಾಬ್ಯಾಗ್‌ಗಳ ವಿತರಣೆಗೆ ಬದಲಾಗಿ ಆಯಾ ತರಗತಿಗಳ ವಿದ್ಯಾರ್ಥಿಗಳಿಗೆ ಗಣಿತ, ಕನ್ನಡ ಹಾಗೂ ಆಂಗ್ಲ ಭಾಷೆಯ ಅಭ್ಯಾಸ ಪುಸ್ತಕಗಳನ್ನು (Practice/exercise books) ನೀಡತಕ್ಕದ್ದು. ಸಾದ್ಯವಾದಷ್ಟು ಈ ಅಭ್ಯಾಸ ಪುಸ್ತಗಳನ್ನು ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಿಸತಕ್ಕದ್ದು. ಅಭ್ಯಾಸ ಪುಸ್ತಕಗಳ ಬಳಕೆಯ ಮೇಲುಸ್ತುವಾರಿ ಮಾಡಲು ಸೂಕ್ತ ಅನುಪಾಲನಾ ವ್ಯವಸ್ಥೆಯನ್ನು ಮಾಡತಕ್ಕದ್ದು. ರಜಾ ಅವಧಿಯಲ್ಲಿ ಮತ್ತು ಶಾಲಾ ದಿನಗಳಲ್ಲಿ ಹೆಚ್ಚಿನ ಅವಧಿಗಳಲ್ಲಿ ಪೂರಕ ಬೋಧನೆ ಕೈಗೊಳ್ಳುವ ಶಿಕ್ಷಕರಿಗೆ ಪರಿಹಾರಾರ್ಥಕ ವ್ಯವಸ್ಥೆ ಮಾಡುವ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಿ ನಿರ್ಧರಿಸಲಾಗುವುದು. 2016-17ನೇ ಸಾಲಿನ ಸುಮಾರು ಒಂದು ಲಕ್ಷ ವಿದ್ಯಾರ್ಥಿಗಳಿಗೆ ಈ ಸೌಲಭ್ಯವನ್ನು ಕಲ್ಪಿಸುವುದು.

2016-17ಕ್ಕೆ ಅನುದಾನದ ವಿವರ: ರೂ 10 ಕೋಟಿ.

**ಅನುಷ್ಠಾನ ಜವಾಬ್ದಾರಿ:** ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಮೇಲುಸ್ತುವಾರಿಯಲ್ಲಿ ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಮತ್ತು ನಿರ್ದೇಶಕರು (ಪ್ರೌಢ ಶಿಕ್ಷಣ) ಇವರು ಚಟುವಟಿಕೆ ಅನುಷ್ಠಾನದ ಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ. ನಿರ್ದೇಶಕರು (ಡಿಎಸ್‌ಇಆರ್‌ಟಿ) ಇವರು ಅಭ್ಯಾಸ ಪುಸ್ತಕದ ವಸ್ತುವಿಷಯವನ್ನು ಸಿದ್ದಪಡಿಸಲು ನೆರವಾಗುವುದು. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಮತ್ತು ನಿರ್ದೇಶಕರು (ಪ್ರೌಢ ಶಿಕ್ಷಣ) ಇವರುಗಳಿಗೆ ಚಟುವಟಿಕೆಯನ್ನು ಅನುಷ್ಠಾನಗೊಳಿಸಲು ನೆರವಾಗಲು ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಅಭಿಯಾನ ಕಾರ್ಯಕ್ರಮದ

ರಾಜ್ಯ ಯೋಜನಾ ಕಚೇರಿಯಿಂದ ಒಬ್ಬೊಬ್ಬ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸತಕ್ಕದ್ದು.

**6. ಸ್ವಯಂಸೇವಾ ಸಂಸ್ಥೆಗಳೊಂದಿಗೆ ಪಾಲುದಾರಿಕೆ:**

ಗುಣಮಟ್ಟ ಅಭಿವೃದ್ಧಿ ಮತ್ತು ವಿದ್ಯಾರ್ಥಿಗಳನ್ನು ಪ್ರೇರೇಪಿಸಲು "ಲಾಭಕ್ಕಲ್ಲದ" ಸರ್ಕಾರೇತರ ಸಂಸ್ಥೆಗಳು ತಮ್ಮ ಚಟುವಟಿಕೆಗಳನ್ನು ಹೆಚ್ಚು ಶಾಲೆಗಳಿಗೆ ವಿಸ್ತರಿಸಲು ನೆರವಾಗುವಂತೆ, ಮುಂದಿನ 3 ವರ್ಷಗಳವರೆಗೆ ಯೋಜನಾ ವೆಚ್ಚದ 50%ರಷ್ಟನ್ನು ಸರ್ಕಾರದಿಂದ ಸಹಾಯ ಮಾಡಲಾಗುವುದು. ಇಂತಹ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವ ಸರ್ಕಾರೇತರ ಸಂಸ್ಥೆಗಳು ವಿದ್ಯಾರ್ಥಿಗಳ ಸಾಧನೆ ಜಾಡು ಹಿಡಿಯುವ ತಂತ್ರಾಂಶದ (Students Achievement Tracking System) ಮೂಲಕ ಕಾರ್ಯಕ್ರಮ ಅನುಷ್ಠಾನದ ದತ್ತಾಂಶವನ್ನು ಇಲಾಖೆಗೆ ಸಲ್ಲಿಸತಕ್ಕದ್ದು. ಸಂಬಂಧಿಸಿದ ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಅವರ ಮತ್ತು ಇಲಾಖೆಯ ಹೊಣೆಗಾರಿಕೆಗಳ ವಿವರಗಳನ್ನೊಳಗೊಂಡ ಒಡಂಬಡಿಕೆಗಳನ್ನು ಮಾಡಿಕೊಳ್ಳತಕ್ಕದ್ದು. ಅನುಷ್ಠಾನವನ್ನು ಆದಷ್ಟು ಇಲಾಖೆಯಲ್ಲಿಯೇ ಆಂತರೀಕರಣಗೊಳಿಸಿಕೊಳ್ಳಲು ಪ್ರಯತ್ನಿಸುವುದು.

**2016–17ಕ್ಕೆ ಅನುದಾನದ ವಿವರ: ರೂ 10 ಕೋಟಿ 2ನೇ ಚಟುವಟಿಕೆಯೂ ಸೇರಿದಂತೆ.**

**ಅನುಷ್ಠಾನ ಜವಾಬ್ದಾರಿ:** ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಅಭಿಯಾನ ಕಾರ್ಯಕ್ರಮದ ರಾಜ್ಯ ಯೋಜನಾ ನಿರ್ದೇಶಕರು ಚಟುವಟಿಕೆ ಅನುಷ್ಠಾನದ ಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ. ಪ್ರತಿ ಸ್ವಯಂ ಸೇವಾ ಸಂಸ್ಥೆಯೊಂದಿಗಿನ ಪಾಲುದಾರಿಕೆಗೆ ಸರ್ವ ಶಿಕ್ಷಣ ಅಭಿಯಾನ ಅಥವಾ ರಾಷ್ಟ್ರೀಯ ಮಾಧ್ಯಮಿಕ ಅಭಿಯಾನ ಕಾರ್ಯಕ್ರಮದ ರಾಜ್ಯ ಯೋಜನಾ ಕಚೇರಿಯಿಂದ ಒಬ್ಬೊಬ್ಬ ಅಧಿಕಾರಿಯನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸತಕ್ಕದ್ದು.

30/1/2017

**(ಅಪರ್ಣಾ ಪಾವಟೆ)**
**ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ**
**ಉಪ ಕಾರ್ಯದರ್ಶಿ (ಯೋಜನೆ)**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**